# ಕಾನೂನು ಕಿರಣ

# KANOONU KIRANA

**ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಕಾನೂನು ಸಾಕ್ಷರತಾ ಪತ್ರಿಕೆ**

**ಸಾರ್ವಜನಿಕ ಹಿತಾಸಕ್ತಿಯಲ್ಲಿ * ಖಾಸಗಿ ಪ್ರಸಾರಕ್ಕೆ ಮಾತ್ರ**

**LEGAL LITERACY NEWS LETTER OF KARNATAKA STATE LAW UNIVERSITY, HUBBALLI**

ಹುಬ್ಬಳ್ಳಿ | ನವೆಂಬರ್ 2019 | ಪುಟ-4


## ತಾಂತ್ರಿಕತೆಯ ಮುಂದುವರಿಕೆಯಿಂದ ಖಾಸಗಿ ಹಾಗೂ ಸಾರ್ವಜನಿಕ ಜೀವನದ ಮಧ್ಯೆ ವ್ಯತ್ಯಾಸವಿಲ್ಲದಂತಾಗಿದೆ: ಪ್ರೊ. (ಡಾ.) ಎಚ್. ಕೆ. ನಾಗರಾಜ

ತಾಂತ್ರಿಕತೆಯು ಎಷ್ಟು ಮುಂದುವರೆದಿದೆ ಎಂದರೆ ಖಾಸಗಿ ಹಾಗೂ ಸಾರ್ವಜನಿಕ ಜೀವನದ ಮಧ್ಯೆ ವ್ಯತ್ಯಾಸವಿಲ್ಲದಂತಾಗಿದೆ ಎಂದು ಅನುಚ್ಛೇದ 19 ರ ಕುರಿತು ಮಾತನಾಡುತ್ತಾ ಪ್ರೊ. (ಡಾ.) ಎಚ್. ಕೆ. ನಾಗರಾಜ, ಪ್ರಾಧ್ಯಾಪಕರು ಎನ್. ಎಲ್.ಎಸ್.ಆಯ್.ಯು. ಬೆಂಗಳೂರು ಹೇಳಿದರು. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಮತ್ತು ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ ಸಂಯುಕ್ತವಾಗಿ ವಿಶ್ವವಿದ್ಯಾಲಯದ ದಶಮಾನೋತ್ಸವದ ಅಂಗವಾಗಿ ದಿನಾಂಕ:30-10-2019 ರಂದು ಹಮ್ಮಿಕೊಂಡ 'ಅಂತಾರಾಷ್ಟ್ರೀಯ ಕಾನೂನಿನಲ್ಲಿ ಗೌಪ್ಯತೆಯ ಹಕ್ಕು' ಕುರಿತು ವಿಶೇಷ ಉಪನ್ಯಾಸವನ್ನು ನೀಡುತ್ತಾ ಪ್ರೊ. (ಡಾ.) ಎಚ್. ಕೆ. ನಾಗರಾಜರವರು ಅಂತಾರಾಷ್ಟ್ರೀಯ ಕಾನೂನು ಹೇಗೆ ಗೌಪ್ಯತೆಯ ಹಕ್ಕನ್ನು ಕಾಪಾಡುತ್ತದೆ ಎಂಬುದನ್ನು ವಿವಿಧ ಆಯಾಮಗಳ ನಿದರ್ಶನವನ್ನು ನೀಡುತ್ತಾ ಅಂತಾರಾಷ್ಟ್ರೀಯ ಕಾನೂನು ಸಮರಗಳ ಬಗ್ಗೆ ವಿವರಿಸಿದರು. ಗೌಪ್ಯತೆಯ ಹಕ್ಕನ್ನು ಕಾಪಾಡಲು ಕೇವಲ ರಾಷ್ಟ್ರೀಯ ಸಂವಿಧಾನವಲ್ಲದೆ ಅಂತಾರಾಷ್ಟ್ರೀಯ ಸಂವಿಧಾನಗಳನ್ನು ಕೂಡ ಹುಡುಕಬೇಕು ಎಂದ ಅವರು ವ್ಯಕ್ತಿಯ ವಾಕ್ ಸ್ವಾತಂತ್ರ್ಯದ ಹಾಗೂ ಖಾಸಗಿತನದ ಮಧ್ಯ ಬರುವ ವ್ಯಾಜ್ಯಗಳ ಕುರಿತು ವಿವರಿಸುತ್ತಾ ಒಬ್ಬ ವ್ಯಕ್ತಿಯ ಜ್ಞಾನಕ್ಕೂ ಹಾಗೂ ಮಾಹಿತಿಗೂ ಬಹಳ ವ್ಯತ್ಯಾಸವಿರುತ್ತದೆ ಎಂದು ಪ್ಲೇಟೊರವರ 'ಪ್ಯಾರಾಡಾಕ್ಸ್' ಹಾಗೂ ಅರಿಸ್ಟಾಟಲ್‌ರವರ ಸಿದ್ಧಾಂತಗಳ ಬಗ್ಗೆ ಬೆಳಕು ಚೆಲ್ಲಿದರು. ಮೆಲಾನ್ ವಿರುದ್ಧ ಯುನೈಟೆಡ್ ಕಿಂಗ್ಡಮ್ ಪ್ರಕರಣದಲ್ಲಿ ಖಾಸಗಿತನದ ಹಕ್ಕು ತಮ್ಮ ಪಾಡಿಗೆ ತಾವಿರುವ ಹಕ್ಕು ಎಂದು ಹೇಳಿ ಗೌಪ್ಯತೆಯ ಮಹತ್ವವನ್ನು ಎತ್ತಿ ಹಿಡಿಯಲಾಗಿದೆ ಎಂದು ವಿವರಿಸಿದ ಅವರು, ಪೆಕ್ ವಿರುದ್ಧ ಯುನೈಟೆಡ್ ಕಿಂಗ್ಡಮ್ ಪ್ರಕರಣದಲ್ಲಿ ಅನುಚ್ಛೇದ 12 ಮತ್ತು ಅನುಚ್ಛೇದ 17ರಲ್ಲಿ ಖಾಸಗಿತನದ ವಿವಿಧ ಆಯಾಮಗಳ ಬಗ್ಗೆ ಹೇಳಲಾಗಿದೆ ಎಂದು ಹೇಳುತ್ತಾ ಕಣ್ಗಾವಲು ಕಾನೂನಿನ ಬಗ್ಗೆ ವಿವರಿಸಿದರು. ಕಣ್ಗಾವಲು ಕಾನೂನು ರಕ್ಷಣೆಗಾಗಿ ಮಾಡಲಾದರೂ ಸಹ ಕಣ್ಗಾವಲು ಮಾಡುವುದು ಹಿಂಸೆ ಹಾಗೂ ಶೋಷಣೆಯೇ ಆಗಿದೆ ಎಂದು ಅಭಿಪ್ರಾಯ ಪಡುತ್ತಾ ಡಿಜಿಟಲೀಕರಣದಿಂದ ಹೇಗೆ ಗೌಪ್ಯತೆಗೆ ಹಾನಿಯುಂಟಾಗುತ್ತಿದೆ ಎಂದು ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ. ಪಿ. ಈಶ್ವರ ಭಟ್ ಗೌರವಾನ್ವಿತ ಕುಲಪತಿಗಳು, ಕರಾಕಾವಿ, ಹುಬ್ಬಳ್ಳಿ, ಇವರು



ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮತ್ತು ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಬೆಂಗಳೂರು ಇವರು ದಿನಾಂಕ: 30.10.2019 ರಂದು ಸಂಯುಕ್ತವಾಗಿ ಹಮ್ಮಿಕೊಂಡ 'ಅಂತಾರಾಷ್ಟ್ರೀಯ ಕಾನೂನಿನಲ್ಲಿ ಗೌಪ್ಯತೆಯ ಹಕ್ಕು' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕುರಿತು ಪ್ರೊ. (ಡಾ.) ಎಚ್. ಕೆ. ನಾಗರಾಜ, ಪ್ರಾಧ್ಯಾಪಕರು ಎನ್.ಎಲ್.ಎಸ್.ಆಯ್.ಯು., ಬೆಂಗಳೂರು ಇವರು ಮಾತನಾಡುತ್ತಿರುವವರು. ಚಿತ್ರದಲ್ಲಿ ಪ್ರೊ.(ಡಾ.) ಪಿ. ಈಶ್ವರ ಭಟ್ ಗೌರವಾನ್ವಿತ ಕುಲಪತಿಗಳು, ಕರಾಕಾವಿ, ಹುಬ್ಬಳ್ಳಿ ಹಾಗೂ ಪ್ರೊ. ಮಲ್ಲಿಕಾರ್ಜುನಯ್ಯ, ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಬೆಂಗಳೂರು ಉಪಸ್ಥಿತರಿರುವರು.

(ನಾಲ್ಕನೇ ಪುಟಕ್ಕೆ)

## ಸಂಪಾದಕೀಯ

ನಮ್ಮ ಕಾನೂನು ವ್ಯವಸ್ಥೆಯ ಕಾರ್ಯಾಚರಣೆಯು ನ್ಯಾಯಸಾಧನೆಗೆ ದಾರಿಯಾಗಬೇಕೆಂದೂ, ರಾಜ್ಯವು ಸರ್ವರಿಗೂ ಸಮಾನ ನ್ಯಾಯವನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊತ್ತಿದೆಯೆಂದೂ ಹೇಳುವ ಸಾಂವಿಧಾನಿಕ ನಿರ್ದೇಶನದ (ಅನುಚ್ಛೇದ 39 A) ಇಂಗಿತವು ಕಾನೂನಿಗೂ ನ್ಯಾಯಕ್ಕೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸುವುದಲ್ಲದೆ ಕಾನೂನು ನೆರವಿನ ಧೋರಣೆಯ ತಿರುಳು ಕೂಡಾ ಆಗಿದೆ. ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸುವುದು ಕಾನೂನು ನೆರವು ಕಾರ್ಯಕ್ರಮದ ಅನಿವಾರ್ಯ ಭಾಗವಾಗಿದೆ. ಕಾನೂನು ನೆರವು ಕೇಂದ್ರ (legal aid clinic) ಮತ್ತು ಕಾನೂನು ಸಾಕ್ಷರತಾ ಆಂದೋಲನದ ಮೂಲಕ ಕಾನೂನು ವಿದ್ಯಾರ್ಥಿಗಳು ತಮ್ಮನ್ನು ತಾವು ಸಾಮುದಾಯಿಕ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವುದು ಕಾನೂನಿನ ಸಾಮಾಜಿಕ ಪ್ರಸ್ತುತತೆಯನ್ನು, ಸುಖೀ ಪ್ರಜಾಪ್ರಭುತ್ವದ ಆಯಾಮವನ್ನು ಹಾಗೂ ಕಾನೂನು ಕಾರ್ಯಾಚರಣೆಯ ಪ್ರಕ್ರಿಯೆಯನ್ನು ಅರಿತುಕೊಳಲು ಬಹಳಷ್ಟು ಸಹಾಯ ವಾಗುತ್ತವೆ. ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಸೇವಾಸಕ್ತ ಸಂಘಟನೆಗಳೊಂದಿಗೆ ಪಾಲುಗಾರಿಕೆ ಯಿಂದ ಕಾರ್ಯ ನಿರ್ವಹಿಸುವುದು ವಿದ್ಯಾರ್ಥಿಗಳ ಕೌಶಲ್ಯವರ್ಧನೆಗೂ ಅವಕಾಶ ಮಾಡಿಕೊಡುತ್ತದೆ.

ಮೇಲಿನ ಧ್ಯೇಯಕ್ಕೆ ಪೂರಕವಾಗಿರುವ ಹಾಗೂ ಸಾರ್ವಜನಿಕರಿಗೆ ಕಾನೂನು ಮಾಹಿತಿಯನ್ನು ಪ್ರಸರಿಸುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ **'ಕಾನೂನು ಕಿರಣ'** 2019ನೇ ಇಸವಿಯ ನವೆಂಬರ್ ಸಂಚಿಕೆ ನಿಮ್ಮ ಮುಂದಿದೆ. ಈ ಸಾಕ್ಷರತಾ ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಾಕ್ಷರತಾ/ ನೆರವು ಕಾರ್ಯಕ್ರಮಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಲು ನಿಮ್ಮ ಸಲಹೆಗೆ ಸ್ವಾಗತ.

**ನಿಮ್ಮ ವಿಶ್ವಾಸಿ,**
**ಪ್ರೊ. (ಡಾ.) ಪಿ. ಈಶ್ವರ ಭಟ್**
ಕುಲಪತಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ.


## ಸಂಪಾದಕೀಯ ಮಂಡಳಿ

**ಪ್ರೊ. (ಡಾ.) ಪಿ. ಈಶ್ವರ ಭಟ್** — **ಪೋಷಕರು**
ಕುಲಪತಿಗಳು
ಕರಾಕಾವಿ, ಹುಬ್ಬಳ್ಳಿ.

**ಪ್ರೊ. ಡಾ. ಸಿ. ಎಸ್. ಪಾಟೀಲ** — **ಸಲಹೆಗಾರರು**
ಡೀನ್ ಮತ್ತು ನಿರ್ದೇಶಕರು,
ಕರಾಕಾವಿ ಕಾನೂನು ಶಾಲೆ, ಹುಬ್ಬಳ್ಳಿ.

**ಶ್ರೀ ಆರ್. ರವಿಶಂಕರ್** ಭಾ.ಆ.ಸೇ — **ಸಲಹೆಗಾರರು**
ಕುಲಸಚಿವರು
ಕರಾಕಾವಿ, ಹುಬ್ಬಳ್ಳಿ.

**ಡಾ. ಜಿ. ಬಿ. ಪಾಟೀಲ** — **ಸಲಹೆಗಾರರು**
ಕುಲಸಚಿವರು ಮೌಲ್ಯಮಾಪನ (ಪ್ರಭಾರ),
ಕರಾಕಾವಿ, ಹುಬ್ಬಳ್ಳಿ.

**ಡಾ. ಭೀಮಾಬಾಯಿ ಎಸ್. ಮೂಲಗೆ** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.

**ಡಾ. ರಂಗಸ್ವಾಮಿ ಡಿ.** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.

**ಶ್ರೀ. ಸುನಿಲ ಬಾಗಡೆ** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.


## ಭಾಗ-7 : ಪ್ರಾಚೀನ ವಸ್ತುಗಳ ಮತ್ತು ಕಲಾಭಂಡಾರದ ಅಧಿನಿಯಮ, 1972


-ಪ್ರೊ. (ಡಾ.) ಪಿ. ಈಶ್ವರ ಭಟ್
ಕುಲಪತಿಗಳು
ಕರಾಕಾವಿ, ನವನಗರ, ಹುಬ್ಬಳ್ಳಿ


ಅಕ್ಟೋಬರ್ ಸಂಚಿಕೆಯ ಮುಂದುವರೆದ ಭಾಗ

### (ಈ) ನೋಂದಾವಣೆ ಮೂಲಕ ನಿಯಂತ್ರಣ

ಕೇಂದ್ರ ಸರಕಾರವು ಕಾಲಕಾಲಕ್ಕೆ ರಾಜ್ಯಪತ್ರದಲ್ಲಿ ಪ್ರಕಟಿಸುತ್ತಾ ಈ ಅಧಿನಿಯಮದ ಅಡಿಯಲ್ಲಿ ನೋಂದಾವಣೆ ಮಾಡತಕ್ಕುದಾದ ಪ್ರಾಚೀನ ವಸ್ತುಗಳನ್ನು ನಮೂದಿಸಬಹುದು. ಹಾಗೆ ಮಾಡುವಾಗ ಕಲಾ ವಸ್ತುಗಳ ಸಂರಕ್ಷಣೆಯ ಅವಶ್ಯಕತೆ, ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಇನ್ನೂ ಚೆನ್ನಾಗಿ ಗುಣಗ್ರಹಣ ಮಾಡುವುದಕ್ಕಾಗಿ ಸದರಿ ವಸ್ತುಗಳನ್ನು ಭಾರತದಲ್ಲಿ ರಕ್ಷಿಸಿಕೊಳ್ಳಬೇಕಾದ ಅಗತ್ಯ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಪೊರೆಯುವುದಕ್ಕೆ ಕೊಡುಗೆಯನ್ನೀಯುವ ಇತರ ಅಂಶಗಳನ್ನು ಗಮನದಲ್ಲಿಡತಕ್ಕುದು. ಹಾಗೆ ನಮೂದಿಸಲಾದ ಯಾವುದೇ ಪ್ರಾಚೀನ ವಸ್ತುಗಳ ಮಾಲಿಕತ್ವ, ಹತೋಟಿ ಅಥವಾ ಸ್ವಾಧೀನ ಹೊಂದಿದ ವ್ಯಕ್ತಿಯು ಪ್ರಕಟಣೆಯ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ನೋಂದಾವಣಾ ಅಧಿಕಾರಿಯ ಮುಂದೆ ತಮ್ಮ ಪ್ರಾಚೀನ ವಸ್ತುಗಳನ್ನು ನೋಂದಾವಣೆ ಮಾಡತಕ್ಕುದು. ಇತರ ವ್ಯಕ್ತಿಗಳು ತಮ್ಮ ಮಾಲಿಕತ್ವ, ಹತೋಟಿ ಅಥವಾ ಸ್ವಾಧೀನಕ್ಕೆ ಸದರಿ ಪ್ರಾಚೀನ ವಸ್ತುಗಳು ಬಂದ ದಿನಾಂಕದಿಂದ 15 ದಿನಗಳೊಳಗೆ ನೊಂದಾವಣೆ ಮಾಡತಕ್ಕುದು (ಕಲಂ 14).

ಕೇಂದ್ರ ಸರಕಾರವು ಮೇಲಿನ ಉದ್ದೇಶಕ್ಕಾಗಿ ನೋಂದಾವಣಾ ಅಧಿಕಾರಿಗಳ ಕ್ಷೇತ್ರವ್ಯಾಪ್ತಿಯನ್ನು ನಿಗದಿಪಡಿಸುತ್ತಾ ಸೂಕ್ತ ವ್ಯಕ್ತಿಗಳನ್ನು ಸದರಿ ಹುದ್ದೆಗೆ ನೇಮಕಾತಿ ಮಾಡಬಹುದು (ಕಲಂ 15). ಯಾವುದೇ ಪ್ರಾಚೀನ ವಸ್ತುವನ್ನು ನೋಂದಾವಣೆ ಮಾಡಬೇಕಾಗಿರುವ ಪ್ರತಿಯೊಬ್ಬ ವ್ಯಕ್ತಿಯೂ ನೋಂದಾವಣಾ ಅಧಿಕಾರಿಯ ಮುಂದೆ ನೋಂದಾವಣಿ ಪತ್ರದ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕುದು. ಸದರಿ ಅರ್ಜಿಯು ರಾಜ್ಯಪತ್ರದಲ್ಲಿ ಪ್ರಕಟವಾದ ರೀತ್ಯಾ ನೋಂದಾವಣೆಗೊಳ್ಳಬೇಕಾದ ಪ್ರಾಚೀನ ವಸ್ತುಗಳ ಭಾವಚಿತ್ರಗಳನ್ನು ಮತ್ತಿತರ ಸೂಚಿತ ವಿವರಗಳನ್ನು ಹೊಂದಿರತಕ್ಕದು. ಸದರಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನೋಂದಾವಣಾ ಅಧಿಕಾರಿಯು ಸೂಕ್ತವಾದ ವಿಚಾರಣೆಯನ್ನು ಮಾಡಿ ನೋಂದಾವಣೆಯ ಕುರಿತು ಕ್ರಮ ಕೈಗೊಳ್ಳುವುದು. ಯಾವುದೇ ನೋಂದಾವಣಿ ಅರ್ಜಿಯನ್ನು ಅಹವಾಲು ಹೇಳಿಕೊಳ್ಳುವ ಸಮಂಜಸ ಅವಕಾಶ ಕೊಡದೆ ಹೊರತು ನಿರಾಕರಿಸತಕ್ಕದಲ್ಲ (ಕಲಂ 16). ನೋಂದಾಯಿತ ಪ್ರಾಚೀನ ವಸ್ತುಗಳ ಮಾಲಿಕತ್ವ, ಹತೋಟಿ ಅಥವಾ ಸ್ವಾಧೀನವನ್ನು ಹೊಂದಿದ ಯಾವುದೇ ವ್ಯಕ್ತಿಯು ಸದರಿ ವಸ್ತುಗಳ ಪರಾಭಾರೆ ಮಾಡಿದಲ್ಲಿ ಆ ವಿಚಾರವನ್ನು ನೋಂದಾವಣಾ ಅಧಿಕಾರಿಗೆ ತಿಳಿಸತಕ್ಕುದು (ಕಲಂ 17). ನೋಂದಾವಣೆಗೆ ಸಂಬಂಧಿಸಿದ ಮೇಲಿನ ಕಟ್ಟುಪಾಡುಗಳು ವಸ್ತುಸಂಗ್ರಹಾಲಯ, ಕಚೇರಿ, ಪತ್ರಾಗಾರ ಅಥವಾ ಶೈಕ್ಷಣಿಕ ಅಥವಾ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಇಡಲಾದ ಸರಕಾರದ ಸ್ಥಳೀಯ ಸಂಸ್ಥೆಗಳ ಮತ್ತಿತರ ನಿರ್ವಾಹಕರ ಮಾಲಿಕತ್ವ, ಹತೋಟಿ ಅಥವಾ ನಿರ್ವಹಣೆಯಲ್ಲಿರುವ ಪ್ರಾಚೀನ ವಸ್ತುಗಳಿಗೆ ಅನ್ವಯವಾಗುವುದಿಲ್ಲ (ಕಲಂ 18).

### (ಉ) ಕೇಂದ್ರ ಸರಕಾರವು ಕಡ್ಡಾಯವಾಗಿ ಆರ್ಜಿಸಿ ಸ್ವಾಧೀನಗೊಳಿಸುವ ಮೂಲಕ ನಿಯಂತ್ರಣ

ಯಾವುದೇ ಪ್ರಾಚೀನ ಮತ್ತು ಅಥವಾ ಕಲಾಭಂಡಾರವನ್ನು ಒಂದು ಸಾರ್ವಜನಿಕ ಸ್ಥಳದಲ್ಲಿ ರಕ್ಷಿಸುವುದು ಸೂಕ್ತವೆಂದು ಕೇಂದ್ರ ಸರಕಾರವು ಅಭಿಪ್ರಾಯಪಟ್ಟಲ್ಲಿ ಸದರಿ ಪ್ರಾಚೀನ ವಸ್ತು ಅಥವಾ ಕಲಾಭಂಡಾರದ ಕಡ್ಡಾಯ ಸ್ವಾಧೀನಗೊಳಿಸುವ ಆದೇಶವನ್ನು ಹೊರಡಿಸಬಹುದು. ಸದರಿ ಆದೇಶದ ಅನ್ವಯ ಸಂಬಂಧಪಟ್ಟ ಜಿಲ್ಲಾಧಿಕಾರಿಯು ತನ್ನ ಕ್ಷೇತ್ರವ್ಯಾಪ್ತಿಯಲ್ಲಿ ಬರುವ ಕಡ್ಡಾಯ ಸ್ವಾಧೀನಕ್ಕೊಳಗಾದ ಪ್ರಾಚೀನ ವಸ್ತು ಅಥವಾ ಕಲಾಭಂಡಾರವನ್ನು ಅದರ ಮಾಲೀಕನಿಗೆ ತಿಳುವಳಿಕೆ ಪತ್ರ ನೀಡಿ ಕೇಂದ್ರ ಸರಕಾರದ ಸ್ವಾಧೀನತಾ ನಿರ್ಣಯವನ್ನು ತಿಳಿಸುತ್ತಾ ಸದರಿ ಪ್ರಾಚೀನ ವಸ್ತು ಅಥವಾ ಕಲಾಭಂಡಾರವನ್ನು ಏತಕ್ಕೆ ತೆಗೆದುಕೊಳ್ಳಬಹುದು ಮತ್ತು ಈ ಉದ್ದೇಶಕ್ಕಾಗಿ ಅವಶ್ಯವಿರುವ ಬಲಪ್ರಯೋಗವನ್ನು ಮಾಡಬಹುದು. ಒಂದು ವೇಳೆ ಮಾಲೀಕನು ಕಡ್ಡಾಯ ಸ್ವಾಧೀನತೆಗೆ ಆಕ್ಷೇಪ ವ್ಯಕ್ತಪಡಿಸುವುದಾದರೆ ಸ್ವಾಧೀನಗೊಳಿಸಿದ 30 ದಿನಗಳೊಳಗೆ ಕೇಂದ್ರ ಸರಕಾರಕ್ಕೆ ಮನವಿ ಮಾಡುವುದರ

(ನಾಲ್ಕನೇ ಪುಟಕ್ಕೆ)

# ಅಂತರ್ಜಾತಿ ವಿವಾಹ

ಶ್ರೀಧರ ಭೋವಿ
7ನೇ ಸೆಮಿಸ್ಟರ್, ಬಿಬಿ.ಎ., ಎಲ್ಎಲ್.ಬಿ.(ಆನರ್ಸ್)
ಕ.ರಾ.ಕಾ.ವಿ. ಕಾನೂನು ಶಾಲೆ, ನವನಗರ, ಹುಬ್ಬಳ್ಳಿ

**ಪೀಠಿಕೆ**

ಪ್ರೀತಿಯು ಒಂದು ಸುಂದರವಾದ ಭಾವನೆಯಾಗಿದೆ, ಅದನ್ನು ಜಾತಿ ಅಥವಾ ಧರ್ಮದಂತಹ ತಕ್ಕಡಿಯಲ್ಲಿಟ್ಟು ತೂಗಬಾರದು. ಯುವಕರಿಗೆ ತಮ್ಮದೇ ಆದ ಆಯ್ಕೆ ಇದೆ ಮತ್ತು ಅವರು ತಮ್ಮ ಜಾತಿಯ ಅಥವಾ ಧರ್ಮಕ್ಕೆ ಸೇರಿದ ವ್ಯಕ್ತಿಯನ್ನು ಮದುವೆಯಾಗುವುದಕ್ಕಿಂತ ಹೆಚ್ಚಾಗಿ ತಮ್ಮೊಂದಿಗೆ ಉತ್ತಮ ರೀತಿಯಲ್ಲಿ ಹೊಂದಾಣಿಕೆಯಾಗುವ ವ್ಯಕ್ತಿಯನ್ನು ಮದುವೆಯಾಗಲು ಬಯಸುತ್ತಾರೆ. ಈ ನಿರ್ಧಾರಕ್ಕೆ ಜಾತಿ ಅಥವಾ ಧರ್ಮ ಅಡ್ಡಿಯಾಗತಕ್ಕದ್ದಲ್ಲ. ಜಾತಿ ಹೊರಗಿನ ವಿವಾಹಕ್ಕೆ ಅಂತರ್ಜಾತಿ ವಿವಾಹವೆಂದು ಕರೆಯುತ್ತಾರೆ. ಅಂತರ್ಜಾತಿ ವಿವಾಹದಡಿಯಲ್ಲಿ ಎರಡು ವಿಭಿನ್ನ ಜಾತಿಗೆ ಸೇರಿದ ವ್ಯಕ್ತಿಗಳು ವಿವಾಹವಾಗುವುದನ್ನು ನೋಡುತ್ತೇವೆ. ಇಂತಹ ವಿಶೇಷವಾದ ವಿವಾಹಕ್ಕೆ ಒತ್ತು ನೀಡಲು ವಿಶೇಷ ವಿವಾಹ ಕಾಯ್ದೆಯನ್ನು 1954 ರಲ್ಲಿ ಜಾರಿಗೆ ತರಲಾಯಿತು. ಈ ಕಾಯ್ದೆಯಡಿಯಲ್ಲಿ ವಿವಾಹವಾಗಬಯಸುವ ವ್ಯಕ್ತಿಗಳು ನೊಂದಣಿಯ ಮೂಲಕ ವಿವಾಹವಾಗಬಹುದು ಇದಕ್ಕೆ ಅವನ/ಅವಳ ಧರ್ಮವನ್ನು ತ್ಯಜಿಸುವಂತಹ ಅಗತ್ಯವಿಲ್ಲ.

ಜಾತಿ ಪೂರ್ವಾಗ್ರಹಗಳನ್ನು ಕಡಿಮೆ ಮಾಡಲು ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಮತ್ತು ಸಮಾಜದಲ್ಲಿ ಸಮಾನತೆ, ಐಚ್ಛಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲು ಅಂತರ್ಜಾತಿ ವಿವಾಹವು ಒಂದು ಮಹತ್ವದ ಅಸ್ತ್ರವಾಗಿದೆ. ಸಾಮಾಜಿಕ ಏಕೀಕರಣಕ್ಕಾಗಿ ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸುವುದು ಡಾ. ಬಿ. ಆರ್. ಅಂಬೇಡ್ಕರ ರವರ ಪ್ರಮುಖ ಯೋಜನೆಯಗಳಲ್ಲೊಂದಾಗಿತ್ತು. ಇಂತಹ ವಿವಾಹಗಳನ್ನು ಪ್ರೋತ್ಸಾಹಿಸಲು ಮತ್ತು ನವದಂಪತಿಗಳಿಗೆ ಆರ್ಥಿಕ ನೆರವನ್ನು ನೀಡಲು ಭಾರತ ಸರಕಾರವು ಧನ ಸಹಾಯ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ಹೊಸದಾಗಿ ಮದುವೆಯಾದ ದಂಪತಿಗಳು ತೆಗೆದುಕೊಂಡು ದಿಟ್ಟ ನಿರ್ಧಾರವನ್ನು ಶ್ಲಾಘಿಸುವುದು ಮತ್ತು ನವದಂಪತಿಗಳಿಗೆ ತಮ್ಮ ಆರಂಭಿಕ ವೈವಾಹಿಕ ಜೀವನವನ್ನು ಸುಲಲಿತವಾಗಿ ನಡೆಸಲು ಸಾಧ್ಯವಾಗುವಂತೆ ಆರ್ಥಿಕ ಪ್ರೋತ್ಸಾಹ ಧನವನ್ನು ನೀಡುವುದೇ ಆಗಿದೆ. ಆದರೆ ಈ ಯೋಜನೆಯನ್ನು ಉದ್ಯೋಗ ಸೃಷ್ಟಿ ಅಥವಾ ಬಡತನ ನಿವಾರಣೆಗಳ ಯೋಜನೆಗೆ ಪೂರಕ ಯೋಜನೆಯೆಂದು ಪರಿಗಣಿಸುವಂತಿಲ್ಲ.

**ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ಧನ**

ಭಾರತದಲ್ಲಿನ ಜಾತಿ ವ್ಯವಸ್ಥೆಯು ಜಾತಿಯ ಹೊರಗೆ ಮದುವೆಯಾಗುವುದನ್ನು ನಿಷೇಧಿಸಿದ್ದಾಗ್ಯೂ ಕೂಡಾ ಹೆಚ್ಚುತ್ತಿರುವ ಶಿಕ್ಷಣ, ಉದ್ಯೋಗ, ಮಧ್ಯಮ ವರ್ಗದ ಆರ್ಥಿಕ ಮಟ್ಟದ ಸುಧಾರಣೆ ಮತ್ತು ನಾಗರಿಕತೆಯ ಹಿನ್ನೆಲೆಗಳಿಂದ ಅಂತರ್ಜಾತಿ ವಿವಾಹಗಳು ಕ್ರಮೇಣ ಸಮಾಜದಲ್ಲಿ ಸ್ವೀಕೃತಗೊಂಡಿವೆ. 2014ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಸುಮಾರು 5% ವಿವಾಹಗಳು ಅಂತರ್ಜಾತಿ ವಿವಾಹಗಳಾಗಿವೆ. ಅಂತರ್ಜಾತಿ ವಿವಾಹಕ್ಕೆ ಪ್ರವೇಶಿಸುವ ದಂಪತಿಗಳಿಗೆ 2.5 ಲಕ್ಷ ರೂ. ದವರೆಗೆ ಪ್ರೋತ್ಸಾಹ ಧನವನ್ನು ನೀಡುವುದು ಸರ್ಕಾರದ ಯೋಜನೆಯಾಗಿದೆ. ಅದರಂತೆ ಅಂತರ್ಜಾತಿ ವಿವಾಹಕ್ಕೆ ಒತ್ತು ಕೊಟ್ಟು ಮದುವೆಯಾದ ದಂಪತಿಗಳಿಗೆ ಹುಟ್ಟುವ ಹೆಣ್ಣು ಮಗುವಿನ ಹೆಸರಲ್ಲಿ ಪೋಷಕರು ಸುಕನ್ಯಾ ಸಮೃದ್ಧಿ ಯೋಜನೆಯ ಅಡಿಯಲ್ಲಿ ಹಣವನ್ನು ಠೇವಣಿ ಇಡಬಹುದು.

2013 ರಲ್ಲಿ ಆರಂಭಗೊಂಡ ಡಾ. ಬಿ. ಆರ್. ಅಂಬೇಡ್ಕರ ಯೋಜನೆಯು ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ 2.50 ಲಕ್ಷ ರೂ.ಗಳ ಧನಸಹಾಯ ಮಾಡುತ್ತದೆ. ಕಾನೂನು ರೀತ್ಯ ಅಂತರ್ಜಾತಿ ವಿವಾಹವಾದ ಜೋಡಿಗಳು ಈ ಯೋಜನೆಯಡಿಯಲ್ಲಿ ಧನ ಸಹಾಯ ಪಡೆಯಲು ಅರ್ಹರಾಗಿರುತ್ತಾರೆ. ಈ ಯೋಜನೆಯಡಿಯಲ್ಲಿ ಪ್ರತಿ ಮದುವೆಗೆ ರೂ. 2.50 ಲಕ್ಷ ರೂ. ಗಳ ಧನಸಹಾಯ ನೀಡಲಾಗುತ್ತದೆ. ಇಂತಹ ಧನಸಹಾಯ ಪಡೆಯಬೇಕಾದರೆ 10 ರೂ. ಮೌಲ್ಯದ ನ್ಯಾಯಾಂಗ ಅಂಚೆಚೀಟಿ ಕಾಗದದ ಮೇಲೆ ಪೂರ್ವ ಸ್ಟ್ಯಾಂಪ್ ಮಾಡಿದ ರಶೀದಿಯನ್ನು ಪಡೆದ ನಂತರ ಅರ್ಹ ದಂಪತಿಗಳು 1.50 ಲಕ್ಷ ಪ್ರೋತ್ಸಾಹದ ಮೊತ್ತವನ್ನು RTGS ನ ಮೂಲಕ ಜಂಟಿ ಬ್ಯಾಂಕ್ ಖಾತೆಗೆ ಪಡೆಯುತ್ತಾರೆ. ಮತ್ತು ಬಾಕಿ ಉಳಿದ ಮೊತ್ತವನ್ನು ದಂಪತಿಗಳ ಹೆಸರಿನಲ್ಲಿ ಸ್ಥಿರ ಠೇವಣಿಯಾಗಿ ಮೂರು ವರ್ಷಗಳ ಕಾಲ ಇಡಲಾಗುತ್ತದೆ. ಈ ಯೋಜನೆಯಡಿಯಲ್ಲಿ ವರ್ಷಕ್ಕೆ ಸುಮಾರು 500 ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹವನ್ನು ನೀಡಲಾಗುತ್ತದೆ. ಅಂತರ್ಜಾತಿ ವಿವಾಹವನ್ನು ಉತ್ತೇಜಿಸುವ ಮತ್ತು ದಲಿತರ ಹಣಕಾಸಿನ ಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ನರೇಂದ್ರ ಮೋದಿ ಸರ್ಕಾರವು ಪ್ರತಿ ಅಂತರ್ಜಾತಿ ವಿವಾಹಕ್ಕೆ 2.5 ಲಕ್ಷ ರೂಪಾಯಿಗಳನ್ನು ನೀಡುವ ಯೋಜನೆಯನ್ನು ಹಮ್ಮಿಕೊಂಡಿದೆ.

**ಅಂತರ್ಜಾತಿ ವಿವಾಹಕ್ಕೆ ಅರ್ಹತೆ**

ಈ ಯೋಜನೆಯ ಅರ್ಹತೆಗೆ ಸಂಗಾತಿಗಳಲ್ಲಿ ಯಾರಾದರೊಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು, ಅವರ ಮದುವೆಯು ಕಾನೂನಿನ ಪ್ರಕಾರ ಮಾನ್ಯವಾಗಿರುವುದರ ಜೊತೆಗೆ ಹಿಂದೂ ವಿವಾಹ ಕಾಯ್ದೆ 1955 ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಿರಬೇಕು. ಈ ಯೋಜನೆ ಅಡಿಯಲ್ಲಿ ಎರಡನೇ ಅಥವಾ ನಂತರದ ಮದುವೆಗೆ ಯಾವುದೇ ಪ್ರೋತ್ಸಾಹ ಧನ ಲಭ್ಯವಿರುವುದಿಲ್ಲ. ಮದುವೆಯಾದ ಒಂದು ವರ್ಷದೊಳಗೆ ಪ್ರಸ್ತಾಪವನ್ನು ಸಲ್ಲಿಸಿದರೆ ಪ್ರಸ್ತಾಪವನ್ನು ಮಾನ್ಯವೆಂದು ಪರಿಗಣಿಸಲಾಗುತ್ತದೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರು ಮತ್ತು ಡಾ. ಬಿ. ಆರ್. ಅಂಬೇಡ್ಕರ ಪ್ರತಿಷ್ಠಾನದ ಅಧ್ಯಕ್ಷರ ವಿವೇಚನೆಯ ಪ್ರಕಾರ ದಂಪತಿಗಳಿಗೆ ಈ ಪ್ರೋತ್ಸಾಹಧನವನ್ನು ನೀಡಲಾಗುವುದು.

**ಅಂತರ್ಜಾತಿ ವಿವಾಹ ಯೋಜನೆ ಸವಲತ್ತಿಗೆ ಲಗತ್ತಿಸಬೇಕಾದಂತಹ ದಾಖಲೆಗಳು**

1. ರೇಷನ್ ಕಾರ್ಡ.
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
3. ದಂಪತಿಗಳ ಸಂಬಳದ ಪ್ರಮಾಣ ಪತ್ರ.
4. ಅಂತರ್ಜಾತಿ ವಿವಾಹದ ದಾಖಲಾತಿ (ಮದುವೆಯ ದೃಢೀಕರಣ ಪತ್ರ).
5. ಸಬ್‌ರಜಿಸ್ಟ್ರಾರ್ ಕಛೇರಿ ಅಥವಾ ಪಂಚಾಯತ್ ಅಧ್ಯಕ್ಷರು ನೀಡಿದ ಪ್ರಮಾಣಪತ್ರ.
6. ಎನ್.ಎಸ್.ಎಸ್. ಅಥವಾ ಎಸ್. ಎನ್. ಡಿ. ಯಿಂದ ಹೊರಡಿಸಲಾದ ಘೋಷಣಾ ಪತ್ರ.
7. ಅಂತರ್ಜಾತಿ ವಿವಾಹವಾದ ದಂಪತಿಗಳು ಇಂತಹ ವರ್ಷದಿಂದ ವಿವಾಹವಾದರು ಎಂಬುದನ್ನು ದೃಢೀಕರಿಸಲು ಗೆಜೆಟೆಡ್ ಅಧಿಕಾರಿ, ಶಾಸಕ ಅಥವಾ ಪ್ರದೇಶದ ಸಂಸದರಿಂದ ಪಡೆದ ಅನುಮೋದನಾ ಘೋಷಣಾ ಪತ್ರ.

(ನಾಲ್ಕನೇ ಪುಟಕ್ಕೆ)

## ಸಾಂಸ್ಕೃತಿಕ ಪರಂಪರೆಯ...

(ಎರಡನೇ ಪುಟದಿಂದ)

ಮೂಲಕ ಆಕ್ಷೇಪ ವ್ಯಕ್ತಪಡಿಸಬಹುದು. ಕೇಂದ್ರ ಸರಕಾರವು ಸದರಿ ಮನವಿಯ ಕುರಿತು 90 ದಿನಗಳೊಳಗೆ ಸೂಕ್ತವಾದ ವಿಚಾರಣೆಯನ್ನು ಮಾಡಿ ಸ್ವಾಧೀನದ ಆದೇಶವನ್ನು ರದ್ದುಗೊಳಿಸುವ ಅಥವಾ ದೃಢೀಕರಿಸುವ ನಿರ್ಣಯವನ್ನು ಮಾಡತಕ್ಕುದು. ಆದೇಶವು ರದ್ದಾದರೆ ಸೊತ್ತನ್ನು ಮಾಲಿಕನಿಗೆ ಹಿಂತಿರುಗಿಸತಕ್ಕದು; ದೃಢೀಕರಣ ವಾದರೆ ಕೇಂದ್ರ ಸರಕಾರದ ಸ್ವಾಧೀನಕ್ಕೆ ಸದರಿ ಸೊತ್ತು ಹೋಗುವುದು ನೈಜವಾದ ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದ ಸೊತ್ತುಗಳನ್ನು ಸ್ವಾಧೀನ ಪಡಿಸತಕ್ಕದಲ್ಲ (ಕಲಂ 19).

ಪ್ರಾಚೀನ ವಸ್ತು ಅಥವಾ ಕಲಾಭಂಡಾರವನ್ನು ಮೇಲಿನಂತೆ ಕಡ್ಡಾಯ ಸ್ವಾಧೀನಕ್ಕೊಳಪಡಿಸಿದಾಗ ಈ ಕೆಳಗಿನ ರೀತಿಯಲ್ಲಿ ಮತ್ತು ಸೂಚಿತ ತತ್ವಗಳಿ ಗನುಸಾರವಾಗಿ ಪರಿಹಾರವನ್ನು ಕೊಡತಕ್ಕುದು. ಒಪ್ಪಂದ ಮಾಡಿಕೊಂಡರೆ ಒಪ್ಪಂದದ ಪ್ರಕಾರ ಪರಿಹಾರ ನೀಡಬೇಕು. ಒಪ್ಪಂದಕ್ಕೆ ಬಾರದಿದ್ದ ಪಕ್ಷದಲ್ಲಿ ಕೇಂದ್ರ ಸರಕಾರವು ಉಚ್ಚನ್ಯಾಯಾ ಲಯದ ನ್ಯಾಯಮೂರ್ತಿಯಾಗಲು ಅರ್ಹತೆ ಯುಳ್ಳ ವ್ಯಕ್ತಿಯನ್ನು ಮಧ್ಯಸ್ಥ ನಿರ್ಣಾಯಕನನ್ನಾಗಿ ನೇಮಿಸಬಹುದು. ಅವನಿಗೆ ಸಹಾಯಕನಾಗಿ ಪ್ರಾಚೀನ ವಸ್ತು ಅಥವಾ ಕಲಾಭಂಡಾರದ ಕುರಿತು ತಜ್ಞನಾಗಿರುವ ವ್ಯಕ್ತಿಯನ್ನು ಕೇಂದ್ರ ಸರಕಾರವು ನೇಮಿಸಬಹುದು. ಹಾಗೆಯೇ ಸಂತ್ರಸ್ತ ವ್ಯಕ್ತಿಯು ಕೂಡಾ ಮೌಲ್ಯ ನಿರ್ಣಾಯಕನನ್ನು ನೇಮಿಸ ಬಹುದು. ಕೇಂದ್ರ ಸರಕಾರ ಮತ್ತು ನೊಂದ ವ್ಯಕ್ತಿ ಮಧ್ಯಸ್ಥಿಕೆ ನಡಾವಳಿಯ ಆರಂಭದಲ್ಲಿ ತಮ್ಮ ಅಂದಾಜಿನ ಮೌಲ್ಯವನ್ನು ಸೂಚಿಸಬಹುದು. ಮಧ್ಯಸ್ಥ ನಿರ್ಣಾಯಕನು ಎರಡೂ ಕಡೆಯ ಅಹವಾಲನ್ನು ಕೇಳಿ ಯುಕ್ತವಾದ ಪರಿಹಾರವನ್ನು ಸೂಚಿಸಬಹುದು. ಮಧ್ಯಸ್ಥ ನಿರ್ಣಾಯಕನು ಎರಡು ಕಡೆಯ ಅಹವಾಲನ್ನು ಕೇಳಿ ಯುಕ್ತವಾದ ಪರಿಹಾರವನ್ನು ನಿರ್ಧರಿಸಿ ಹಕ್ಕುದಾರರಿಗೆ ಕೊಡ ಬೇಕಾದ ಮೊತ್ತವನ್ನು ನಿಗದಿಪಡಿಸುವನು. ಪರಿಹಾರದ ಮೊಬಲಗನ್ನು ನಿರ್ಣಯಿಸುವಾಗ ಪ್ರಾಚೀನ ವಸ್ತು ಅಥವಾ ಕಲಾಭಂಡಾರದ ಕಾಲ; ಅವುಗಳ ಕಲೆ, ಸೌಂದರ್ಯ; ಐತಿಹಾಸಿಕ, ಪ್ರಾಕ್ತನ ಶಾಸ್ತ್ರೀಯ, ವಾಸ್ತು ಶಿಲ್ಪೀಯ ಮತ್ತು ಮಾನವ ಶಾಸ್ತ್ರೀಯ ಮಹತ್ವ; ಅವುಗಳ ಅಪರೂಪತೆ, ಮತ್ತು ರಕ್ಷಣೆಗೆ ಸಂಗತವಾದ ಇತರ ವಿಚಾರಗಳನ್ನು ಮಧ್ಯಸ್ಥ ನಿರ್ಣಾಯಕನು ಗಮನಕ್ಕೆ ತೆಗೆದು ಕೊಳ್ಳಬೇಕು (ಕಲಂ 20).

**(ಊ) ಅಧಿನಿಯಮದ ಉಲ್ಲಂಘನೆಗೆ ಶಿಕ್ಷೆ**

ಮೇಲೆ ವಿವರಿಸಿದ ಕಲಂ 3ನ್ನು ಉಲ್ಲಂಘಿಸಿ ಪ್ರಾಚೀನ ವಸ್ತು ಅಥವಾ ಕಲಾಭಂಡಾರವನ್ನು ರಫ್ತು ಮಾಡಿದ ವ್ಯಕ್ತಿಗೆ ಕನಿಷ್ಠ 6 ತಿಂಗಳು ಗರಿಷ್ಠ ಮೂರು ವರ್ಷದ ಸೆರೆಮನೆವಾಸ ಮತ್ತು ದಂಡ; ಕಲಂ 5 ಇತ್ಯಾದಿ ಅಡಿಯಲ್ಲಿ ರಹದಾರಿಯಿಲ್ಲದ ಅಥವಾ ರಹದಾರಿ ಷರತ್ತುಗಳನ್ನು ಉಲ್ಲಂಘಿಸಿ, ಪ್ರಾಚೀನ ವಸ್ತುಗಳನ್ನು ಮಾರಾಟ ಮಾಡುವ ಮತ್ತು ಮಾರಾಟಕ್ಕಿಡುವ ಕೃತ್ಯಕ್ಕೆ 6 ತಿಂಗಳ ಗರಿಷ್ಠ ಸೆರೆಮನೆವಾಸ ಮತ್ತು ದಂಡ; ರಹದಾರಿ ಅಧಿಕಾರಿಯು ಪ್ರಾಚೀನ ವಸ್ತುಗಳ ದಾಖಲೆ, ಭಾವಚಿತ್ರ ಅಥವಾ ದಸ್ತಾವೇಜುಗಳ ಪರಿವೀಕ್ಷಣೆ ಮಾಡುವುದಕ್ಕೆ ಅಡ್ಡಿಪಡಿಸುವ ಕೃತ್ಯಕ್ಕೆ 6 ತಿಂಗಳ ಗರಿಷ್ಠ ಸೆರೆಮನೆವಾಸ ಮತ್ತು ದಂಡವನ್ನು ಅಧಿನಿಯಮದಲ್ಲಿ ನಿಗದಿಪಡಿಸಲಾಗಿದೆ (ಕಲಂ 23). ಅಲ್ಲದೆ, ಸಂಬಂಧಿತ ಸೊತ್ತುಗಳನ್ನು ಮುಟ್ಟುಗೋಲು ಹಾಕಲು ಸರಕಾರಕ್ಕೆ ಅಧಿಕಾರ ಇದೆ. ಕೇಂದ್ರ ಸರಕಾರದ ಅಧಿಕಾರಿಗಳ ಒಪ್ಪಿಗೆ ಯೊಂದಿಗೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡ ಬಹುದು ಪ್ರಥಮ ದರ್ಜೆಯ ದಂಡಾಧಿಕಾರಿ ನ್ಯಾಯಾಲಯಕ್ಕೆ ಅಧಿಕಾರ ಕೊಡಲಾಗಿದೆ. ಕಂಪೆನಿಗಳು ಅಪರಾಧ ಮಾಡಿದ್ದಲ್ಲ ಕಂಪೆನಿಯ ವ್ಯವಹಾರದ ನಿರ್ವಾಹಕರಿಗೆ ಹೊಣೆಗಾರಿಕೆ ಬರುತ್ತದೆ ಯಾವುದೇ ಸರಕು, ಪದಾರ್ಥ ಅಥವಾ ವಸ್ತು, ಅಥವಾ ಹಸ್ತಪ್ರತಿ, ದಾಖಲೆ ಅಥವಾ ಇತರ ದಸ್ತಾವೇಜುಗಳು ಈ ಅಧಿನಿಯಮದ ಉದ್ದೇಶ ಕ್ಕಾಗಿ ಪ್ರಾಚೀನ ವಸ್ತು ಅಥವಾ ಕಲಾಭಂಡಾರವಾಗಿ ಪರಿಗಣಿಸಬಹುದೆ ಎಂಬ ಪ್ರಶ್ನೆ ಬಂದಾಗ ಭಾರತೀಯ ಪ್ರಾಚ್ಯಶಾಸ್ತ್ರ ಪರಿವೀಕ್ಷಣದ ನಿರ್ದೇಶಕ ರಿಗಿಂತ ಕೆಳಗಿನ ಸ್ಥಾನವಲ್ಲದ ಅಧಿಕಾರಿಗೆ ಉತ್ತರ ಕ್ಕಾಗಿ ಉಲ್ಲೇಖಿಸಬಹುದು ಮತ್ತು ಸದರಿ ಸಂಸ್ಥೆಯ ಮಹಾನಿರ್ದೇಶಕರ ನಿರ್ಣಯವು ಅಂತಿಮ ವಾಗಿರುತ್ತದೆ (ಕಲಂ 24).

ಒಟ್ಟಿನಲ್ಲಿ ಈ ಅಧಿನಿಯಮವು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಲು ಬಹು ವಿಧವಾದ ಮಾರ್ಗಗಳನ್ನು, ವ್ಯಾಪಕವಾದ ನೀತಿಯನ್ನು ಮತ್ತು ಸುಸೂತ್ರವಾದ ಪ್ರಕ್ರಿಯೆಯನ್ನು ರೂಪಿಸಿದ್ದನ್ನು ಗಮನಿಸಬಹುದು. ಪ್ರಾಚ್ಯವಸ್ತುಗಳ ಕಳ್ಳಸಾಗಾಣಿಕೆ ಇತ್ಯಾದಿ ದಂಧೆಗಳಿಗೆ ಕಡಿವಾಣ ಹಾಕುವ ಇದರ ನೀತಿ ಪ್ರಶಂಸಾರ್ಹವಾಗಿದೆ ಮತ್ತು ಸಂವಿಧಾನದ ಆಶಯಕ್ಕೆ ಪೂರಕವಾಗಿದೆ. ❖

## ಅಂತರ್ಜಾತಿ ವಿವಾಹ

(ಮೂರನೇ ಪುಟದಿಂದ)

8. ಮತದಾರರ ಗುರುತಿನ ಚೀಟಿ.
9. ಆಧಾರ ಕಾರ್ಡ ನಕಲು.
10. ಭಾವಚಿತ್ರ (ಗಂಡ ಮತ್ತು ಹೆಂಡತಿಯ ಜೋಡಿ ಭಾವಚಿತ್ರ).

**ಕರ್ನಾಟಕದಲ್ಲಿ ವಾಸಿಸುತ್ತಿರುವ ದಂಪತಿಗಳು**

ಮದುವೆಯಾದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸಿದವರಿಗೆ ಮಾತ್ರ ಈ ಪ್ರೋತ್ಸಾಹ ಧನ ನೀಡಲಾಗುವುದು. 1-4-2018 ರಂದು ಅಥವಾ ನಂತರ ಮದುವೆಯಾದ ಅಂತರ್ಜಾತಿ ವಿವಾಹಿತ ದಂಪತಿಗಳು ಪರಿಷ್ಕೃತ ಪ್ರೋತ್ಸಾಹಕ ಧನಕ್ಕೆ ಅರ್ಹರಾಗಿದ್ದಾರೆ. ಅದರಂತೆ ಪುರುಷರಿಗೆ 2.50 ಲಕ್ಷ ಮತ್ತು ಮಹಿಳೆಯರಿಗೆ 3.00 ಲಕ್ಷ. ರೂ. ಗಳವರೆಗೆ ಪ್ರೋತ್ಸಾಹಧನ ನೀಡಲಾಗುವುದು.

**ಪರಿಸಮಾಪ್ತಿ**

ಅಂತರ್ಜಾತಿ ವಿವಾಹವು ಜಾತಿ ವ್ಯವಸ್ಥೆಯ ತಡೆಗೋಡೆಯನ್ನು ತೆಗೆದು ಹಾಕುವ ಅತ್ಯುತ್ತಮ ಸಾಧನವಾಗಿದೆ. ಬಾಳಸಂಗಾತಿಯನ್ನು ಆಯ್ಕೆ ಮಾಡುವ ಹಕ್ಕು ಒಬ್ಬರ ಸ್ವಂತ ನಿರ್ಧಾರವಾಗಿದೆ. ಇದನ್ನು ಜಾತಿಯ ಲೆಕ್ಕಾಚಾರದಿಂದ ಅಳೆಯಲು ಆಗುವುದಿಲ್ಲ. ಜಾತಿಗಳ ವಿವಾದಾಂಶಗಳನ್ನು ಮುಕ್ತಾಯ ಮಾಡುವುದಕ್ಕೊಸ್ಕರ ಮತ್ತು ಸಮಾಜದಲ್ಲಿ ನಾವೆಲ್ಲರೂ ಒಂದು ಎನ್ನುವ ಭಾವನೆಯನ್ನು ಮೂಡಿ ಬದುಕುವುದಕ್ಕೊಸ್ಕರ ಸರ್ಕಾರವು ಅನೇಕ ಯೋಜನೆಗಳನ್ನು ಜಾರಿಗೆ ತಂದು ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸು ತ್ತಿರುವುದು ಶ್ಲಾಘನೀಯ. ❖

## ತಾಂತ್ರಿಕತೆಯ ಮುಂದುವರಿಕೆಯಿಂದ

(ಒಂದನೇ ಪುಟದಿಂದ)

ಮಾತನಾಡುತ್ತಾ ದಶಕದ ಸಂಭ್ರಮವು ಕ್ಯಾಲೆಂಡರ್ ಮುಂತಾದವು ಗಳನ್ನು ಹಂಚುವುದರ ಬದಲು ಉತ್ತಮ ಸಂದೇಶ ವನ್ನು ಹಂಚುವ ಮೂಲಕ ಆಚರಿಸಬೇಕು ಎಂದು ಅಭಿಪ್ರಾಯಪಟ್ಟರು. ವೇದಿಕೆಯ ಮೇಲೆ ಪ್ರೊ. ಮಲ್ಲಿಕಾರ್ಜುನಯ್ಯ, ಪ್ರಾಂಶುಪಾಲರು, ಕೆ.ಎಲ್.ಇ. ಸಂಸ್ಥೆಯ ಕಾನೂನು ಮಹಾವಿದ್ಯಾಲಯ, ಬೆಂಗಳೂರು ಇವರು ಉಪಸ್ಥಿತರಿದ್ದರು. ಗಣ್ಯರು, ಆಹ್ವಾನಿತರು ಬೋಧಕ ಮತ್ತು ಬೋಧ ಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಮುಂತಾದವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ❖